## ಚುನಾವಣಾ ಪ್ರಸ್ತಾವ.

ಉಪಾಧ್ಯಕ್ಷರು : ಶ್ರೀ ಎಂ.ಸಿ. ನಾಣಯ್ಯ, (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗೂ ವಾರ್ತಾ ಮತ್ತು ಪ್ರಚಾರ ಇಲಾಖೆಯ ಮಂತ್ರಿ) ಅವರು 1995ನೇ ಸಾಲಿನ ಅಂಗವಿಕಲರ (ಸಮಾನ ಅವಕಾಶ ಹಕ್ಕು ರಕ್ಷಣಾ ಹಾಗೂ ಪೂರ್ಣ ಭಾಗತ್ವ) ಅಧಿನಿಯಮದ 13(2) (ಜೆ) ಕಲಮಿನ ಮೇರೆಗೆ ಈ ಸಭೆ ಅಂಗವಿಕಲರ ಕ್ಷೇಮಾಭಿವೃದ್ಧಿಗಾಗಿ ಸಮಗ್ರ ನೀತಿಯೊಂದನ್ನು ಸಿದ್ಧಪಡಿಸುವುದಕ್ಕಾಗಿ ಮತ್ತು ಅಂಗವಿಕಲರ ಅಧಿನಿಯಮ 1995ನ್ನು ಜಾರಿಗೊಳಿಸಲು ರಾಜ್ಯ ಸಮನ್ವಯ ಸಮಿತಿಗೆ ಇಬ್ಬರು ವಿಧಾನಸಭಾ ಸದಸ್ಯರನ್ನು ಚುನಾಯಿಸಬೇಕು.

ಶ್ರೀ ಎಂ.ಸಿ. ನಾಣಯ್ಯ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ವಾರ್ತಾ ಮತ್ತು ಪ್ರಚಾರ ಇಲಾಖಾ ಮಂತ್ರಿಗಳು) : 1995ನೇ ಸಾಲಿನ ಅಂಗವಿಕಲರ (ಸಮಾನ ಅವಕಾಶ ಹಕ್ಕು ರಕ್ಷಣಾ ಹಾಗೂ ಪೂರ್ಣ ಭಾಗತ್ವ) ಅಧಿನಿಯಮದ 13(2)(ಜೆ) ಕಲಮಿನ ಮೇರೆಗೆ ಈ ಸಭೆ ಅಂಗವಿಕಲರ ಕ್ಷೇಮಾಭಿವೃದ್ಧಿಗಾಗಿ ಸಮಗ್ರ ನೀತಿಯನ್ನು ಸಿದ್ಧಪಡಿಸುವುದಕ್ಕೆ ಮತ್ತು ಅಂಗವಿಕಲರ ಅಧಿನಿಯಮ 1995ನ್ನು ಜಾರಿಗೊಳಿಸಲು ರಾಜ್ಯ ಸಮನ್ವಯ ಸಮಿತಿಗೆ ಇಬ್ಬರು ವಿಧಾನಸಭಾ ಸದಸ್ಯರನ್ನು ಚುನಾಯಿಸಬೇಕೆಂದು ನಾನು ಕೇಳುತ್ತೇನೆ.

## ಅಂಗೀಕರಿಸಲಾಯಿತು

## ವರದಿಯನ್ನೊಪ್ಪಿಸುವುದು

ಉಪಾಧ್ಯಕ್ಷರು : ಈಗ ವಿಷಯ ಸಮಿತಿಯ ವರದಿಯನ್ನು ಡಿ.ಆರ್. ಪಾಟೀಲರು ಒಪ್ಪಿಸುವುದು.

ಶ್ರೀ ಡಿ.ಆರ್. ಪಾಟೀಲ (ಗದಗ) : ಮಾನ್ಯ ಉಪಾಧ್ಯಕ್ಷರೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ವಿಷಯ ಸಮಿತಿ ಪರವಾಗಿ ಮೂರನೇ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಉಪಾಧ್ಯಕ್ಷರು : ಈಗ ಶೂನ್ಯ ವೇಳೆ, ಸುರೇಶ್‌ಕುಮಾರ್, ರಾಮಲಿಂಗಾರೆಡ್ಡಿ, ರಾಜಣ್ಣ, ಹಾಗೂ ಟಿ.ಎಸ್. ಪ್ರಕಾಶ್.

## ಅಧ್ಯಕ್ಷರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯ

ದಿನಾಂಕ 14.8.97ರಂದು ಬಿ.ಟಿ.ಎಸ್ ಸಿಬ್ಬಂದಿ ಚಳುವಳಿಗೆ ಕರೆ ನೀಡಿರುವುದು

ಶ್ರೀ ಎಸ್. ಸುರೇಶಕುಮಾರ್ (ರಾಜಾಜಿನಗರ) : ಸನ್ಮಾನ್ಯ ಉಪಾಧ್ಯಕ್ಷರೆ, ಬೆಂಗಳೂರಿನಲ್ಲಿ ಪ್ರತಿದಿನ ಸುಮಾರು 22 ಲಕ್ಷ ಜನರು ಈ ಬಿಟಿಎಸ್ ಬಸ್ಸಿನ ಮೇಲೆ ಅವಲಂಬಿತರಾಗಿ ಜೀವನ ನಡೆಸುತ್ತಿದ್ದಾರೆ. ಇದೇ ಆಗಸ್ಟ್ 14ರಂದು ಬೆಂಗಳೂರಿನ ಬಿಟಿಎಸ್ ಸಿಬ್ಬಂದಿ ಒಂದು ಚಳುವಳಿಯನ್ನು ಪ್ರಾರಂಭ ಮಾಡುತ್ತಿದ್ದಾರೆ. ನಮ್ಮ ಸಾರಿಗೆ ಸಚಿವರು ಹಾಗೂ ಕಾರ್ಮಿಕ ನಾಯಕರ ಜಗಳ ಒಂದು ರೀತಿ ಗಂಡ ಹೆಂಡತಿಯರ ಜಗಳದ ನಡುವೆ ನಾಗರೀಕರು ಇವತ್ತು ಬಡ ಕೂಸು ಆಗುತ್ತಿದ್ದಾರೆ. ಈ

ಜಗಳ ಯಾವ ಮಟ್ಟಕ್ಕೆ ಬಂದಿದೆ ಎಂದರೆ ಈಗ ಸಿಂಧ್ಯಾರವರು ವಿಲ್ಸನ್ ಗಾರ್ಡನ್ ಪೋಲೀಸ್ ಸ್ಟೇಷನ್‌ಗೆ ಹೋಗಿ ತಮ್ಮ ಪ್ರಾಣಕ್ಕೆ ಅಪಾಯ ಇದೆ ಎಂದು ಕಂಪ್ಲೇಂಟ್ ಕೊಡುವ ಮಟ್ಟಕ್ಕೆ ಈ ಜಗಳ ತಲುಪಿದೆ. ಇವತ್ತು ಸಾರಿಗೆ ಸಚಿವರು ಬೆಂಗಳೂರು ನಗರದ ನಾಗರೀಕರಿಗೆ ಅನೇಕ ಆಶ್ವಾಸನೆಯನ್ನು ಕೊಡುತ್ತಾ ಬಂದರು. ದೂರು ಬಂದರೆ ನಾವು ಖಾಸಗಿ ಬಸ್ಸುಗಳನ್ನು ಬಿಡುತ್ತಿದ್ದೇವೆ, 100 ದಿನಗಳ ಒಳಗಡೆ ನಾನು ಸಾರಿಗೆ ಖಾತೆಯನ್ನು ಕಾಯಕಲ್ಪ ಮಾಡದಿದ್ದರೆ ನಾನು ರಾಜೀನಾಮೆ ಕೊಡುತ್ತೇನೆ. 100 ದಿನಗಳ ಕಾರ್ಯಕ್ರಮ ಹಾಕಿಕೊಳ್ಳುತ್ತೇನೆ ಈ ರೀತಿ ಏನೇನೊ ಆಶ್ವಾಸನೆಯನ್ನು ಕೊಡುತ್ತಾ ಬಂದರು. ಇವತ್ತು, ಆಗಸ್ಟ್ 14ನೇ ತಾರೀಖಿನಂದು ಚಳುವಳಿ ನಡೆಯುತ್ತದೆ. ಇದು ಬಿಟಿಎಸ್ ಸಿಬ್ಬಂದಿ ಚಳುವಳಿ. ಸಾರಿಗೆ ಇಲಾಖೆಯಿಂದ ಬೆಂಗಳೂರು ನಾಗರೀಕರಿಗೆ ಸ್ವಾತಂತ್ರ್ಯೋತ್ಸವದ ಒಂದು ಸುವರ್ಣೋತ್ಸವದ ಈ ಒಂದು ಕೊಡುಗೆ ಒಂದು ಕಾಣಿಕೆಯೇ? ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ. ಮತ್ತು ಪರಿಹಾರ ಕಾರ್ಯಕ್ರಮ ಏನು ತೆಗೆದುಕೊಳ್ಳುತ್ತಾರೆ. ಸಿಬ್ಬಂದಿ ಚಳುವಳಿ ಆದರೂ ಕೂಡ ಬೆಂಗಳೂರು ನಗರದ ನಾಗರೀಕರಿಗೆ ಯಾವುದೇ ರೀತಿ ತೊಂದರೆ ಆಗದಂತೆ ಬೇರೆ ವ್ಯವಸ್ಥೆ ರೂಪಿಸಿದ್ದಾರೋ ಎನ್ನುವ ಪ್ರಶ್ನೆಯನ್ನು ನಾನು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ.

(ಅಧ್ಯಕ್ಷರು ಬಂದು ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು : ರಾಜಣ್ಣರವರೆ ಇದು ಶೂನ್ಯ ವೇಳೆ. ಯಾರು ಮೊದಲು ಬಂದು ನೋಟೀಸ್ ಕೊಟ್ಟಿರುತ್ತಾರೆ ಅವರ ಹೆಸರಿನ ಪ್ರಕಾರ ಹೋಗಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು) : ಅಧ್ಯಕ್ಷರೆ ನನ್ನದು ಒಂದು ಮನವಿ ಇದೆ. ಇದರ ಬಗ್ಗೆ ಸ್ವಲ್ಪ ನಾವು ದೀರ್ಘವಾಗಿ ಚರ್ಚೆ ಮಾಡಬೇಕಾಗುತ್ತದೆ. ಎರಡು ಮೂರು ವಿಷಯಗಳನ್ನು ನಾನು ಪ್ರಸ್ತಾಪ ಮಾಡಬೇಕಾಗುತ್ತದೆ. ದಯಮಾಡಿ ತಾವು ಸೋಮವಾರ ಅಥವಾ ಮಂಗಳವಾರ ನನಗೆ 15 ನಿಮಿಷ ಕಾಲಾವಕಾಶ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನ. ನಾನು ಸರ್ಕಾರದ ಪರವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ರಾಜ್ಯದ ಸಾರಿಗೆ ವ್ಯವಸ್ಥೆಯ ದೃಷ್ಟಿಯಿಂದ ಮತ್ತು ನಗರದ ಸಾರಿಗೆ ವ್ಯವಸ್ಥೆಯಿಂದ ಅಲ್ಲಿ ಎಲ್ಲ ಸದಸ್ಯರಿಗೆ ಏನು ನಡೆಯುತ್ತದೆ ಎನ್ನುವುದನ್ನು ನಾನು ತಿಳಿಸಬೇಕಾಗುತ್ತದೆ. ಆದ್ದರಿಂದ ತಾವು ಸಮಯವನ್ನು ನಿರ್ಧಾರ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೆ, ಆಗಸ್ಟ್14ನೇ ತಾರೀಖು ಬಿಟಿಎಸ್ ಸಿಬ್ಬಂದಿಯವರು ಸಮರ ಸಾರಿ ಬಿಟ್ಟಿದ್ದಾರೆ. ಅವರ ವಿರುದ್ಧ ಸಚಿವರು, ಸಚಿವರ ವಿರುದ್ಧ ಅವರು ಸಮರ ಸಾರಿ ಬಿಟ್ಟಿದ್ದಾರೆ. ಆ ಇಬ್ಬರ ಜಗಳ ನಾವು ಪ್ರತಿನಿತ್ಯ ಪೇಪರ್‌ನಲ್ಲಿ ಓದುತ್ತಿದ್ದೇವೆ. ಹೀಗಾದರೆ ಬೆಂಗಳೂರು ನಾಗರೀಕರ ಕತೆ ಏನು? ಆ ಚಳುವಳಿಯಿಂದ ನಾಗರೀಕರಿಗೆ ತೊಂದರೆ ಆಗದೆ ಇರುವಂತಹ ಪರ್ಯಾಯ ಕಾರ್ಯಕ್ರಮ ಏನು ರೂಪಿಸಿದ್ದೀರಿ ಎಂಬುದರ ಬಗ್ಗೆ ಆಶ್ವಾಸನೆಯನ್ನು ಕೊಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು) : ತಪ್ಪು ಮಾಹಿತಿ ಇಲ್ಲಿ ಹೇಳುತ್ತಿದ್ದಾರೆ. ನಾನು ಯಾವುದೇ ಪೋಲೀಸ್ ಸ್ಟೇಷನ್‌ಗೆ ಹೋಗಿ ಕಂಪ್ಲೇಂಟ್‌ನ್ನು ಯಾರ ಮೇಲೂ ಕೊಟ್ಟಿಲ್ಲ. ಯಾರೋ

ಅಧಿಕಾರಿಗಳು ಮಾತನಾಡುತ್ತಿದ್ದಾಗ ಅವರ ಭಾಷಣದ ಪ್ರಚೋದನೆ ಮೇಲೆ ಸಾರಿಗೆ ಸಚಿವರ ಜೀವಕ್ಕೆ ಅಪಾಯ ಇದೆ ಎಂದು ಕಂಪ್ಲೇಂಟ್ ಕೊಟ್ಟಿದ್ದಾರೆಯೇ ಹೊರತು ನಾನು ಕೊಟ್ಟಿಲ್ಲ. ಎರಡನೆಯದು ನಾನು ಎಲ್ಲೂ ಸಹಿತ ರಾಜೀನಾಮೆ ಕೊಡುತ್ತೇನೆಂದು ಹೇಳಲಿಲ್ಲ. ನಾನು ಹೇಳತಕ್ಕಂಥದ್ದು ಇಲ್ಲಿ ಸರಿಹೋಗುತ್ತದೆ ಎಂದು ನನಗೆ ಅನಿಸಿದೆ. ನಮ್ಮ ಸರ್ಕಾರದಲ್ಲಿ ಎಲ್ಲರೂ ಸೇರಿತೊಂಡು ಇದನ್ನು ಉತ್ತಮ ಪಡಿಸಲಿಕ್ಕೆ ಪ್ರಯತ್ನ ಮಾಡಿದ್ದೇವೆ. ನಾನು ಯಾರ ವಿರುದ್ಧ ಸಹಿತ ಇಲ್ಲ. ಯಾವ ಕಾರ್ಮಿಕ ಸಂಘಟಣೆಗಳ ವಿರುದ್ಧ ಯಾವ ನಾಗರೀಕರ ವಿರುದ್ಧವಾಗಲಿ ನಾನು ಇಲ್ಲ. ಆ ರೀತಿ ನ್ಯಾಯಬದ್ಧವಾಗಿರತಕ್ಕಂಥ ಕಾರ್ಮಿಕ ಸಂಘಗಳ ಎಲ್ಲ ಕೆಲಸಕ್ಕೂ ಸಹಕಾರ ಇದೆ ಮಾತುಕತೆಗೆ ತೆರೆದ ಬಾಗಿಲು ಇದೆ. ಇಷ್ಟು ಹೇಳಿ ನಾನು ಈ ಸಂದರ್ಭದಲ್ಲಿ ಅನೇಕ ವಿಚಾರಗಳನ್ನು ನಾನು ಹೇಳಬೇಕಾಗಿದೆ ಆದ್ದರಿಂದ ದಯಮಾಡಿ ಸೋಮವಾರ, ಅಥವಾ ಮಂಗಳವಾರ ಒಂದು ದಿನಕ್ಕೆ ಮಾತ್ರ ಅವಕಾಶ ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ. ಅವರಿಗೆ ನಾನು ಮನವಿ ಮಾಡಿಕೊಳ್ಳುತ್ತೇನೆ. ನಮ್ಮ ಕಾರ್ಮಿಕರು ಮುಷ್ಕರ ಹೋಗುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಸಾರ್ವಜನಿಕರಿಗೆ ತೊಂದರೆಯಾಗುತ್ತದೆಂದು ಅವರಿಗೆ ನಾನು ಮನವಿ ಮಾಡಿಕೊಳ್ಳುತ್ತೇನೆ ಒಂದು ಪಕ್ಷ ಕೆಲವು ಹಿತಾಸಕ್ತಿಗಳು ತಮ್ಮ ಪ್ರತಿಷ್ಠೆಯನ್ನು ಹೆಚ್ಚು ಮಾಡಿಕೊಳ್ಳುವುದಕ್ಕೆ ಮಾಡಿದರೆ ಇದಕ್ಕೆ ಪರ್ಯಾಯ ವ್ಯವಸ್ಥೆಯನ್ನು ನಾವು ಮಾಡುತ್ತೇವೆ. ಇದಕ್ಕೆ ಬೇಕಾಗಿರತಕ್ಕಂಥ ಎಲ್ಲ ಸಿದ್ಧತೆಯನ್ನು ಬೆಂಗಳೂರಿನಲ್ಲಿ ಅಷ್ಟೆ ಅಲ್ಲ, ರಾಜ್ಯದ 20 ಜಿಲ್ಲೆಗಳಲ್ಲಿ ನಾವು ಮಾಡಿದ್ದೇವೆ. ಮುಖ್ಯ ಮಂತ್ರಿಗಳು ಸಹ ಎರಡು ಮೂರು ಸಭೆಗಳನ್ನು ಸಡೆಸಿ ಕ್ರಮ ತೆಗೆದುಕೊಂಡಿದ್ದಾರೆ. ದಯಮಾಡಿ ಸೋಮವಾರ, ಮಂಗಳವಾರ 15 ನಿಮಿಷ ಸಮಯ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

+ ಶ್ರೀ ಎನ್. ರಾಜಣ್ಣ (ಭಾರತೀನಗರ) : ಬೆಂಗಳೂರಿನಲ್ಲಿ ಎಲ್ಲಾ ಆಲ್ಟರ್‌ನೇಟಿವ್ ವರ್ಕ್ ಮಾಡಿದ್ದಾರೆಯೇ? ಒಂದು ಸಮಯ ಸ್ಟ್ರೈಕ್ ಹೋದರೆ ಬೇರೆ ಬಸ್ಸುಗಳನ್ನು ಅರೇಂಜ್ ಮಾಡಬೇಕು. ಅದಕ್ಕೆ ಟೆಂಪೋ ವ್ಯವಸ್ಥೆ ಮಾಡಬೇಕು. ಕೊನೆಗೆ ಅವರು ಛೀಮಾರಿ ಹಾಕುವುದು ಬೆಂಗಳೂರು ಶಾಸಕರಿಗೆ. ಅದಕ್ಕೋಸ್ಕರ ಈಗ ಎಚ್ಚರಿಕೆ ವಹಿಸಿ ಅದಕ್ಕೆ ಒಂದು ವ್ಯವಸ್ಥೆ ಮಾಡಬೇಕು. ಯೂನಿಯನ್‌ರವರ ಹತ್ತಿರ ಮಾತನಾಡಿ ಅಮಿಕಬಲ್ ಸೆಟಲ್‌ಮೆಂಟ್‌ಗೆ ಪ್ರಯತ್ನ ಮಾಡಬೇಕು. ಮೂರನೆಯದು ಗೋಲ್ಡನ್ ಜ್ಯುಬಿಲಿಗೆ ನಾವು ಅವರನ್ನು ಸೆಲೆಬ್ರೇಟ್ ಮಾಡುವಾಗ ಸ್ಟ್ರೈಕ್ ಹೋಗಿ ಜನಗಳಿಗೆ ಅನಾನುಕೂಲವಾಗಿ ಅದರ ಬಗ್ಗೆ ಕೂಡ ಜನ ಬಂದು ನಮಗೆ ಛೀಮಾರಿ ಹಾಕುತ್ತಾರೆ ಆದ್ದರಿಂದ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಅವರು ಸಮರ್ಥರಿದ್ದಾರೆ ಅವರು ಏನು ಚಳುವಳಿ ಮಾಡಿದರೂ ಹೆದರುವುದಿಲ್ಲ ಅವರಿಗೆ ಶಕ್ತಿ ಇದೆ. ಆ ರೀತಿ ಆದರೆ ನಾವು ಇರುತ್ತೇವೆ. 14ರಂದು ಸ್ಟ್ರೈಕ್ ನಡೆಯುತ್ತದೆ ಶಾಲೆಗಳು ನಡೆಯುತ್ತವೆ, ಕಾಲೇಜುಗಳು ನಡೆಯುತ್ತವೆ ಸರಕಾರಿ ಕಛೇರಿಗಳು ಇರುತ್ತವೆ ಏನು ಅರೇಂಜ್‌ಮೆಂಟ್ ಮಾಡಿದ್ದಾರೆ ತಾವು ಹೇಳಿದರೆ ಸಾಕು.

ಅಧ್ಯಕ್ಷರು : ಅವರು ಹೇಳಿದರಲ್ಲ, He has already covered all those points.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಸಭೆಯನ್ನು ಸ್ವತಃ ಮುಖ್ಯಮಂತ್ರಿಗಳು ಮಾಡಿದ್ದಾರೆ. ಬೆಂಗಳೂರಿನಲ್ಲಿ ನಾವು ಪರ್ಯಾಯ ವ್ಯವಸ್ಥೆ ಮಾಡಿದ್ದೇವೆ. ರಾಜ್ಯದಲ್ಲೂ ಕೂಡ ನಾವು

ಪರ್ಯಾಯ ವ್ಯವಸ್ಥೆ ಮಾಡಿದ್ದೇವೆ. ಪ್ರಯಾಣಿಕರಿಗೆ ಯಾರಿಗೂ ಸಹಿತ ತೊಂದರೆಯಾಗದಂತೆ ನೋಡಿಕೊಳ್ಳುವ ಪ್ರಯತ್ನವನ್ನು ಮಾಡುತ್ತೇವೆಂದು ತಮ್ಮ ಮೂಲಕ ನಾನು ಈ ಸದನಕ್ಕೆ ಹೇಳುತ್ತೇನೆ.

**ಸಚಿವರ ಹೇಳಿಕೆ**

**ವೃತ್ತಿಪರ ಕಾಲೇಜುಗಳ ಪ್ರವೇಶಾತಿಯಲ್ಲಿ ಕ್ರೀಡಾಪಟುಗಳಿಗೆ ಪ್ರವೇಶ.**

+ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ನಿನ್ನೆ ದಿನ ಮಾನ್ಯ ಸದಸ್ಯರಾದಂಥ ಪುಟಣ್ಣಯ್ಯನವರು ಒಂದು ವಿಚಾರವನ್ನು ಇಟ್ಟಿದ್ದಾರೆ. ಸ್ಪೋರ್ಟ್ಸ್ ಕೋಟಾದ ಬಗ್ಗೆ ತಮಗೆ ನಾನು ಒಂದು ಸ್ಟೇಟ್‌ಮೆಂಟ್‌ನ್ನು ಕೊಡುತ್ತೇನೆಂದು ಹೇಳಿದ್ದೆ. ಇದಕ್ಕೆ ಸಂಬಂಧಪಟ್ಟ ವಿಚಾರವನ್ನು ನಿಯಮ 351ರಲ್ಲಿ ಇಟ್ಟಿದ್ದಾರೆ. ನನಗೆ ಎರಡು ನಿಮಿಷ ಟೈಮ್ ಕೊಟ್ಟರೆ ನಾನು ಅದನ್ನು ಓದಿ ಬಿಡುತ್ತೇನೆ. ಮಾನ್ಯ ಅಧ್ಯಕ್ಷರೆ,

1993ನೇ ಇಸವಿಯಲ್ಲಿ ಜಾರಿಗೆ ತಂದ ಕರ್ನಾಟಕ ಇಂಜಿನಿಯರಿಂಗ್, ಮೆಡಿಕಲ್ ಮತ್ತು ದಂತ ವೈದ್ಯ ಕೋರ್ಸುಗಳ ಪ್ರವೇಶ ನಿಯಮಾವಳಿಗಳಲ್ಲಿ ಅಭ್ಯರ್ಥಿಯು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟಗಳಲ್ಲಿ ಕ್ರೀಡೆಯಲ್ಲಿ ಗಳಿಸಿದ ಸ್ಥಾನಗಳನ್ನು ಮಾತ್ರ ಆಧಾರವಾಗಿಟ್ಟುಕೊಂಡು ಸೀಟು ಹಂಚಿಕೆ ಮಾಡುತ್ತಿದ್ದುದು ನಿಜ ಸಂಗತಿ. ಆದರೆ, ಈ ಪದ್ದತಿಯಲ್ಲಿ ಒಬ್ಬ ಅಭ್ಯರ್ಥಿಯ ಶೈಕ್ಷಣಿಕ ಸಾಧನೆಯನ್ನು ಸಂಪೂರ್ಣವಾಗಿ ಕಡೆಗಣಿಸಲಾಗುತ್ತಿತ್ತು. ಸಾಮಾನ್ಯ ಪ್ರವೇಶ ಪರೀಕ್ಷೆಯು ಅಭ್ಯರ್ಥಿಗಳನ್ನು ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಶಿಕ್ಷಣಕ್ಕಾಗಿ ಆಯ್ಕೆ ಮಾಡಲು ನಡೆಸುವ ಒಂದು ಪರೀಕ್ಷೆಯಾಗಿದೆ.

ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕೋರ್ಸ್‌ಗಳಲ್ಲಿ ಅಧ್ಯಯನ ಮಾಡಬೇಕಾದಲ್ಲಿ ಒಬ್ಬ ವಿದ್ಯಾರ್ಥಿಗೆ ಸಾಕಷ್ಟು ಬುದ್ಧಿಮಟ್ಟವಿರಬೇಕಾಗುತ್ತದೆ. ಹಾಗೂ ಸ್ಪರ್ಧಿಸುವ ಅಭ್ಯರ್ಥಿಗಳ ಪೈಕಿ ಶೈಕ್ಷಣಿಕವಾಗಿ ಉತ್ತಮರನ್ನೇ ಆಯ್ಕೆ ಮಾಡಿದಲ್ಲಿ, ಮುಂದೆ ಸದರಿ ವೃತ್ತಿಗಳಲ್ಲಿಯೂ ಸಹ ಉತ್ತಮರೇ ಇರುತ್ತಾರೆ.

ಈಗ ಜಾರಿಗೆ ಬಂದಿರುವ ಹೊಸ ನಿಯಮಗಳ ಪ್ರಕಾರ ನಿಯಮದ ಅನುಬಂಧ-2ರಲ್ಲಿ ಪಟ್ಟಿ ಮಾಡಿರುವ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಿದ ಅಭ್ಯರ್ಥಿಗಳೆಲ್ಲರನ್ನೂ ಕ್ರೀಡಾ ಕೂಟದಲ್ಲಿ ಪರಿಗಣಿಸಲಾಗುವುದು. ಅವರುಗಳ ಪೈಕಿ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ಅಭ್ಯರ್ಥಿಯು ಮೊದಲನೆ ಸ್ಥಾನವನ್ನು ಆತನಿಗಿಂತ ಅಂಕಗಳಿಸಿದ ಅಭ್ಯರ್ಥಿಯು ಅನಂತರದ ಸ್ಥಾನವನ್ನು, ಹೀಗೆ ಮುಂದುವರೆದು ಸ್ಥಾನಗಳನ್ನು ಪಡೆಯುತ್ತಾರೆ. ಈ ರೀತಿ ಮಾಡುವುದರಿಂದ ಅಭ್ಯರ್ಥಿಗಳ ಕ್ರೀಡಾ ಸಾಧನೆಗೂ ಮತ್ತು ಶೈಕ್ಷಣಿಕ ಸಾಧನೆಗೂ ಸಮನಾದ ಪ್ರಾಮುಖ್ಯತೆ ನೀಡಿದಂತಾಗುತ್ತದೆ. ಅದರ ಬದಲು ಹಳೆಯ ನಿಯಮವನ್ನು ಪರಿಪಾಲಿಸಿದಲ್ಲಿ ಶೈಕ್ಷಣಿಕ ಭವಿಷ್ಯತ್ತನ್ನು ಅರಿಸಿ ಹೊರಟ ಒಬ್ಬ ವ್ಯಕ್ತಿಯ ಶೈಕ್ಷಣಿಕ ಸಾಧನೆಯನ್ನು ಸಂಪೂರ್ಣವಾಗಿ ಕಡೆಗಣಿಸಿ ಭವಿಷ್ಯತ್ತಿನ ಉದ್ದೇಶಕ್ಕೆ ಸಂಬಂಧವೇ ಇಲ್ಲದ ಇನ್ನೊಂದು ರಂಗದ ಸಾಧನೆಯನ್ನು ಪರಿಗಣಿಸಿದಂತಾಗುತ್ತದೆ.